




# ತನೋಟ್ ಮಾತಾ, ಸೈನಿಕರ ಮಂದಿರ

ರಾಜಸ್ಥಾನದ ಜೈಸಲ್ಮೇರ್‌ನಿಂದ ಸುಮಾರು120 ಕಿ.ಮೀ. ದೂರದಲ್ಲಿ, ತನೋಟ್ ಎಂಬ ಹಳ್ಳಿ ಇದೆ. ಇದು ಪಾಕಿಸ್ತಾನ ಗಡಿಗೆ ಸಮೀಪವಿದೆ. ಈ ಹಳ್ಳಿಯಲ್ಲಿ 'ತನೋಟ್ ಮಾತಾ' ದೇವಾಲಯವು 'ಸೈನಿಕರ ಮಂದಿರ'ವೆಂದೇ ಪ್ರಖ್ಯಾತವಾಗಿದೆ. ಸುಮಾರು 1200 ವರ್ಷಗಳ ಹಿಂದಿನಿಂದ ಈ ದೇವಾಲಯ ಅಸ್ತಿತ್ವದಲ್ಲಿದ್ದು, ಈ ದೇವಿಯು ಮರುಭೂಮಿಯ ಗ್ರಾಮಗಳನ್ನು ರಕ್ಷಿಸುತ್ತಾಳೆ ಎಂಬ ನಂಬಿಕೆಯಿದೆ.

ಇದಕ್ಕೆ ಸಾಕ್ಷಿಯೆಂಬಂತಿದೆ ಇಲ್ಲಿನ ಜನರ ಮಾತು. 1965 ಮತ್ತು1971ರ ಭಾರತ–ಪಾಕಿಸ್ತಾನ ಯುದ್ಧಗಳಲ್ಲಿ, ಈ ಮಂದಿರದ ಸುತ್ತಮುತ್ತಲಿನ ಪರಿಸರದಲ್ಲಿ, ಪಾಕಿಸ್ತಾನದ ಬಾಂಬ್‌ಗಳು ಬಿದ್ದರೂ ಸ್ಫೋಟವಾಗಿರಲಿಲ್ಲ ಎನ್ನುವುದು ಇಲ್ಲಿನ ಜನ ಹೇಳುವ ಮಾತು. ಸ್ಥಳೀಯರ ಪ್ರಕಾರ, 1965ರಲ್ಲಿ ಪಾಕಿಸ್ತಾನವು ಈ ದೇವಾಲಯದ ಮೇಲೆ ಸುಮಾರು 3000 ಬಾಂಬ್‌ಗಳನ್ನು ಹಾಕಿತ್ತು. ಅವುಗಳಲ್ಲಿ 450 ಬಾಂಬ್‌ಗಳು ದೇವಾಲಯದ ಆವರಣದಲ್ಲಿ ಬಿದ್ದರೂ ಅವುಗಳ ಪೈಕಿ ಒಂದೂ ಸ್ಫೋಟಿಸಲಿಲ್ಲವಂತೆ. ಈ ಪವಾಡದ ಬಳಿಕ, ಗಡಿ ಭದ್ರತಾ ಪಡೆ (ಬಿ.ಎಸ್.ಎಫ್) ದೇವಾಲಯದ ಪೂಜೆ ಮತ್ತು ಉಸ್ತುವಾರಿಯ ಜವಾಬ್ದಾರಿಯನ್ನು ವಹಿಸಿಕೊಂಡಿತು. 1971ರ ಭಾರತ–ಪಾಕಿಸ್ತಾನ ಯುದ್ಧ(ಲೋಂಗೆವಾಲಾ ಯುದ್ಧ)ದ ಸಮಯದಲ್ಲಿ ತನೋಟ್ ಮಾತಾ ಮಂದಿರದ ಮೇಲೆ ಮತ್ತೊಮ್ಮೆ ದಾಳಿ ನಡೆಸಲಾಯಿತು. ಆಗಲೂ ದಾಳಿ ಮಾಡುತ್ತಿದ್ದ ಟ್ಯಾಂಕ್‌ಗಳು ಮರಳಿನಲ್ಲಿ ಸಿಲುಕಿಕೊಂಡವು. ಪರಿಣಾಮವಾಗಿ ಭಾರತೀಯ ವಾಯುಪಡೆಯು ಅವುಗಳನ್ನು ನಾಶಮಾಡಲು ಅವಕಾಶ ದೊರಕಿ ಯುದ್ಧದಲ್ಲಿ ಜಯ ಗಳಿಸಿತು.

ಭಾರತೀಯ ಸೇನೆಯು ಲೋಂಗೆವಾಲಾ ಕದನದ ವಿಜಯದ ಸ್ಮರಣಾರ್ಥವಾಗಿ ಬಳಿಕ ದೇವಾಲಯದ ಆವರಣದೊಳಗೆ ವಿಜಯ ಸ್ತಂಭವನ್ನೂ, ಸ್ಫೋಟಗೊಳ್ಳದ ಪಾಕಿಸ್ತಾನಿ ಬಾಂಬ್‌ಗಳು ಮತ್ತು ಟ್ಯಾಂಕ್‌ಗಳನ್ನು ಇರಿಸಲು ಯುದ್ಧ ವಸ್ತುಸಂಗ್ರಹಾಲಯವನ್ನೂ ನಿರ್ಮಿಸಿದ್ದು, ಇಂದಿಗೂ ಸುರಕ್ಷಿತವಾಗಿವೆ. ಈಗಲೂ ಇಲ್ಲಿ ಪೂಜೆ ಮಾಡುವ ಹೊಣೆ ಸೈನ್ಯದ ಮೇಲೆಯೇ ಇದೆ. ಪ್ರತಿ ವರ್ಷ ಡಿಸೆಂಬರ್ 16 ಅನ್ನು ದೇವಾಲಯದಲ್ಲಿ 'ವಿಜಯದಿನ'ವೆಂದು ಆಚರಿಸಲಾಗುತ್ತದೆ.

**–ರಮಣ್ ಶೆಟ್ಟಿ ರೆಂಜಾಳ, ಮುಂಬೈ**

# 'ಸಾಸೇಜ್' ಒರಟು ತೊಗಟೆ ಹಣ್ಣು

ಈ ಮರ ಮೈಸೂರಿನ ವಿಜಯನಗರ ಬಡಾವಣೆ 4ನೆಯ ಹಂತದಲ್ಲಿ ಬೆಳೆದು ನಿಂತಿದೆ. ದಾರಿಹೋಕರ ಗಮನ ಸೆಳೆಯುವ ವಿಚಿತ್ರ ಹಣ್ಣುಗಳನ್ನು ಬಿಟ್ಟ ಈ ಮರದ ಹೆಸರು ಕೈಗೆಲಿಯಾ ಆಫ್ರಿಕಾನಾ, ಆಡು ಭಾಷೆಯಲ್ಲಿ ಸಾಸೇಜ್ ಮರ ಎನ್ನುತ್ತಾರೆ. ಮರದ ತುಂಬಾ ದಪ್ಪ ದಪ್ಪ ಒರಟು ತೊಗಟೆಯ ಹಣ್ಣುಗಳು ಬೆಳೆಯುತ್ತವೆ. ಗರಿಷ್ಠ ಮೂರೂವರೆ ಅಡಿಗಳಷ್ಟು ನೀಳವಾಗಿ ಬೆಳೆದ ಈ ಹಣ್ಣುಗಳನ್ನು ಮತ್ತು ಅದರ ಬೀಜಗಳ ರಸವನ್ನು ಹುಳುಕಡ್ಡಿ, ಕಜ್ಜಿ ಮುಂತಾದ ಚರ್ಮ ರೋಗಗಳಿಗೆ ಲೇಪನವಾಗಿ ಬಳಸಬಹುದು ಎನ್ನುತ್ತಾರೆ. ಯಾವುದಕ್ಕೂ ಆಯುರ್ವೇದ ತಜ್ಞರ ಸಲಹೆಯನ್ನು ಅನುಸರಿಸುವುದು ಉತ್ತಮ. ಇದರ ಹಣ್ಣು ವಿಷಪೂರಿತ, ತಿನ್ನಲು ಬಾರದು. ಆದರೆ ನೋಡಲು ಬಲು ಚೆನ್ನ.

**–ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು**

